220
26/8/25

ಕಾರ್ಯಕಾರಿ ಅಭಿಯಂತರರು

ಮಂಗಳೂರು ವಿಶ್ವವಿದ್ಯಾನಿಲಯ

ಸಂಖ್ಯೆ: ಮಂವಿವಿ/ಇಡಿ/ಅಂ.ಬ.ಹ/2025-26/ಎಸ್2 | 392 ಕಾರ್ಯಕಾರಿ ಅಭಿಯಂತರರ ಕಛೇರಿ

ಮಂಗಳಗಂಗೋತ್ರಿ – 574 199

ದಿನಾಂಕ: 18.08.2025

ರಿಗೆ,

ಹಿರಿಯ ಸಹಾಯಕ ನಿರ್ದೇಶಕರು
ವಾರ್ತಾ ಇಲಾಖೆ,
ಮಂಗಳೂರು ದ.ಕ.

ಮಾನ್ಯರೇ,

ವಿಷಯ: ಅಂಗಡಿಗಳ ಬಹಿರಂಗ ಹರಾಜು ಪ್ರಕಟಣೆಯನ್ನು ಪತ್ರಿಕೆಯಲ್ಲಿ ಪ್ರಕಟಿಸುವ ಬಗ್ಗೆ.

ಮಂಗಳೂರು ವಿಶ್ವವಿದ್ಯಾನಿಲಯ ಆವರಣದ ವಾಣಿಜ್ಯ ಸಂಕೀರ್ಣ ಕಟ್ಟಡದಲ್ಲಿರುವ 03 ಅಂಗಡಿ ಮಳಿಗೆಗಳ ಬಹಿರಂಗ ಹರಾಜು ಪ್ರಕಟಣೆಯನ್ನು ಜಿಲ್ಲಾ ಮಟ್ಟದ ಕನ್ನಡ ದೈನಿಕದಲ್ಲಿ ದಿನಾಂಕ 25.08.2025 ರೊಳಗೆ ಪ್ರಕಟಿಸುವಂತೆ ಈ ಮೂಲಕ ಕೋರಲಾಗಿದೆ. ಜಾಹೀರಾತು ಪ್ರಕಟಗೊಂಡ ಪತ್ರಿಕೆಯ ಪ್ರತಿಗಳನ್ನ ಪಾವತಿ ಬಿಲ್ಲಿನ ಸಹಿತ ದ್ವಿಪ್ರತಿಯಲ್ಲಿ ಈ ಕಚೇರಿಗೆ ಕಳುಹಿಸಿಕೊಡಲು ಕೋರಲಾಗಿದೆ. "ಪ್ರಕಟಣೆಯನ್ನು 5x5 cm ನಲ್ಲಿ ಈ ಕೆಳಗಿನಂತೆ ಪ್ರಕಟಿಸುವುದು."

TO Ajay
28/8/2025

ತಮ್ಮ ವಿಶ್ವಾಸಿ,

ಕಾರ್ಯಕಾರಿ ಅಭಿಯಂತರರು (ಪ್ರ)

ಮಂಗಳೂರು ವಿಶ್ವವಿದ್ಯಾನಿಲಯ

ಸಂಖ್ಯೆ:/ಮಂವಿ/ಇಡಿ/ಅಂಗಡಿ/ಕ್ಯಾಂಟೀನ್/ಬ.ಹ/2025-26/ಎಸ್2 ಕಾರ್ಯಕಾರಿ ಅಭಿಯಂತರರ ಕಛೇರಿ

ದಿನಾಂಕ: 18.08.2025

ಬಹಿರಂಗ ಹರಾಜು ಪ್ರಕಟಣೆ

ಮಂ.ವಿ.ವಿ.ಕ್ಕೆ ಸಂಬಂಧಪಟ್ಟ ಅಂಗಡಿ ಮಳಿಗೆಗಳಿಗಾಗಿ (ಒಟ್ಟು 03 ಸಂಖ್ಯೆ) ಬಹಿರಂಗ ಹರಾಜು ಮಾಡಲಾಗುತ್ತಿದ್ದು, ಭಾಗವಹಿಸಲು ಇಚ್ಛಿಸುವವರಿಗೆ ಈ ಕೆಳಗಿನ ಮಾಹಿತಿಗಳನ್ನು ನೀಡಲಾಗಿದೆ.

| ಕ್ರ. ಸಂ | ವಿವರ | ದಿನಾಂಕ |
|---|---|---|
| 1 | ಖಾಲಿ ಹರಾಜು ಫಾರಂಗಳನ್ನು ಈ ಕಚೇರಿಯಿಂದ ವಿತರಿಸುವ ದಿನಾಂಕ | 28.08.2025 |
| 2 | ಬಹಿರಂಗ ಹರಾಜಿಗೆ ಪ್ರತಿ ಮಳಿಗೆಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ | 08.09.2025 |
| 3 | ಬಹಿರಂಗ ಹರಾಜು ನಡೆಯುವ ದಿನಾಂಕ | 18.09.2025 |

ಸೂಚನೆ: 1) ಯಾವುದೇ ಹರಾಜನ್ನು ಮುಂದೂಡುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ವಿಶ್ವವಿದ್ಯಾನಿಲಯವು ಕಾಯ್ದಿರಿಸಿಕೊಂಡಿದೆ.

2) ಹೆಚ್ಚಿನ ಮಾಹಿತಿಗಾಗಿ ಕಾರ್ಯಕಾರಿ ಅಭಿಯಂತರರ ಕಚೇರಿಯನ್ನು ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದು

ದೂರವಾಣಿ ಸಂಖ್ಯೆ: 0824 2287264

ಪ್ರತಿ: 1. ಕುಲಸಚಿವರು ಮಂಗಳೂರು ವಿಶ್ವವಿದ್ಯಾನಿಲಯ – [illegible]
2. [illegible]

ಮಂಗಳೂರು ವಿಶ್ವವಿದ್ಯಾನಿಲಯ

ಸಂಖ್ಯೆ: ಮಂವಿ/ಇಡಿ/ಅಂ.ಬ.ಹ/2025-26/ಎಸ್2

ಕಾರ್ಯಕಾರಿ ಅಭಿಯಂತರರ ಕಛೇರಿ
ಮಂಗಳಗಂಗೋತ್ರಿ – 574 199
ದಿನಾಂಕ: 18.08.2025

**ಬಹಿರಂಗ ಹರಾಜು ಪ್ರಕಟಣೆ**

ಮಂಗಳೂರು ವಿಶ್ವವಿದ್ಯಾನಿಲಯ ಆವರಣದ ವಾಣಿಜ್ಯ ಸಂಕೀರ್ಣದ Shop No. 3, 6, ಮತ್ತು 7 ಗಳನ್ನು (ಒಟ್ಟು 03 ಅಂಗಡಿಗಳು) 2025-26 ನೇ ಸಾಲಿಗೆ ಕರಾರು ಪತ್ರ ಅನುಮೋದನೆಗೊಂಡ ಬಳಿಕ 11 ತಿಂಗಳ ಅವಧಿಗೆ ಬಹಿರಂಗ ಹರಾಜು ಮಾಡಲಾಗುತ್ತದೆ. ಹರಾಜು ದಿನಾಂಕ 18.09.2025 ನೇ ಅಪರಾಹ್ನ / ಪೂರ್ವಾಹ್ನ 3.00 ಗಂಟೆಗೆ ಕುಲಸಚಿವರ ಕಚೇರಿಯಲ್ಲಿ ನಡೆಯುತ್ತದೆ. ಇದರಲ್ಲಿ ಭಾಗವಹಿಸಲು ಇಚ್ಛಿಸುವವರು ಈ ಕೆಳಕಂಡ ನಿಯಮಗಳಿಗೆ ಬದ್ಧರಾಗಿರುವುದು. ಹರಾಜು ಆರಂಭ ಆರಂಭಗೊಳ್ಳುವ ಮೊದಲು ಹಾಜರಿರತಕ್ಕದ್ದು. (ಸದರಿ ದಿನವು ಸರಕಾರಿ ರಜೆ ದಿನವಾಗಿ ಘೋಷಿಸಿದ್ದಲ್ಲಿ, ಮುಂದಿನ ದಿನಕ್ಕೆ ಮುಂದೂಡಲಾಗುವುದು).

1. ಹರಾಜಿನಲ್ಲಿ ಭಾಗವಹಿಸಲು ಇಚ್ಛಿಸುವವರು ರೂ. 10,000.00 ದಂತೆ EMD ಮೊತ್ತವನ್ನು ಪಾವತಿಸುವುದು. (ಟೆಂಡರ್ ನಲ್ಲಿ ಭಾಗವಹಿಸುವವರು ಆಧಾರ್ ಕಾರ್ಡ್, ಪಾನ್ ಕಾರ್ಡ್ ಮತ್ತು ನಿಗದಿತ ಚಲನ್ ಸಂಖ್ಯೆ ಲಗತ್ತಿಸತಕ್ಕದ್ದು) ಹರಾಜಿನಲ್ಲಿ ಯಶಸ್ವಿ ಬಿಡ್ಡುದಾರರ ಹೊರತು ಉಳಿದೆಲ್ಲಾ ಬಿಡ್ಡುದಾರರಿಗೆ ಠೇವಣಿಯನ್ನು ಹರಾಜು ಮುಗಿದ ನಂತರ ಹಿಂತಿರುಗಿಸಲಾಗುವುದು. **ಯಶಸ್ವಿ ಬಿಡ್ಡುದಾರರು ರೂ. 20,000.00 ಮೊತ್ತವನ್ನು ವಿ.ವಿ. ನಿಧಿಗೆ ಕರಾರು ಸಂದರ್ಭದಲ್ಲಿ ಹಣಕಾಸು ಅಧಿಕಾರಿಯವರ ಹೆಸರಿನಲ್ಲಿ ಠೇವಣಿ ಇರಿಸಿ, 02 ತಿಂಗಳ ಮುಂಗಡ ಬಾಡಿಗೆಯನ್ನು ಚಲನ್ ಮೂಲಕ ಪಾವತಿಸತಕ್ಕದ್ದು. ತಪ್ಪಿದ್ದಲ್ಲಿ ನಿಯಮಾನಸಾರ ಇ.ಎಂ.ಡಿ. ಮೊತ್ತವನ್ನು ಮುಟ್ಟುಗೋಲು ಹಾಕಿ ಮರು ಹರಾಜು ಮಾಡಲಾಗುವುದು.**
2. ಯಶಸ್ವಿ ಬಿಡ್ಡುದಾರರು ನಿಗದಿಯಾದ ಬಾಡಿಗೆ ಮೊತ್ತಕ್ಕೆ 18% ಜಿ.ಎಸ್.ಟಿ.ಯನ್ನು ಸೇರಿಸಿ ಪಾವತಿಸತಕ್ಕದ್ದು.
3. ಅಂಗಡಿ ನಂಬ್ರ 3, 6 ಮತ್ತು 7ರ ಕನಿಷ್ಟ ಬಾಡಿಗೆ ಮೊತ್ತ ರೂ. 3,000.00 ಆಗಿರುತ್ತದೆ.
4. ಹರಾಜಿನ ಯಶಸ್ವಿ ಬಿಡ್ಡುದಾರರು ಮರುದಿನವೇ ಬಿಡ್ಡಿನ ಉಳಿದ ಮೊತ್ತ ಮತ್ತು ಬಿಡ್ಡಿನ ಮೊತ್ತಕ್ಕೆ ನಿಗದಿ ಮಾಡಲ್ಪಟ್ಟ ಮಾರಾಟ ತೆರಿಗೆಯ ಬಗ್ಗೆ ರೂ. 500/- ರ ಛಾಪಾ ಕಾಗದದಲ್ಲಿ ವಿಶ್ವವಿದ್ಯಾನಿಲಯದ ಕರಾರುಗಳಿಗೆ ಒಪ್ಪಿ ಕರಾರು ಪತ್ರವನ್ನು ಮಾಡಿಕೊಡಬೇಕಾಗುತ್ತದೆ. ತಪ್ಪಿದಲ್ಲಿ ಮರು ಹರಾಜಿಗೆ ಕ್ರಮಕೈಗೊಳ್ಳಲಾಗುವುದು.
5. ಕರಾರು ಆದೇಶದಲ್ಲಿ ನಮೂದಿಸಿದ ದಿನಾಂಕದಿಂದ ಯಾವುದೇ ರೀತಿಯ ಆಕಸ್ಮಿಕದ ನಷ್ಟಕ್ಕೆ ವಿಶ್ವವಿದ್ಯಾನಿಲಯವು ಹೊಣೆಯಲ್ಲ. ಸ್ವೀಕೃತವಾದ ಬಿಡ್ಡಿನ ಮೊತ್ತವು ಕುಲಸಚಿವರಿಂದ ಶಿಫಾರಸ್ಸುಗೊಂಡಂದಿನಿಂದ ಅತೀ ಹೆಚ್ಚಿನ ಬಿಡ್ಡಿಗೆ ಭಾಗವಹಿಸಿದ ಬಿಡ್ಡುದಾರರು 2025-26 ನೇ ಸಾಲಿಗೆ ಕರಾರು ಪತ್ರ ಅನುಮೋದನೆಗೊಂಡ ದಿನಾಂಕದಿಂದ ಗುತ್ತಿಗೆದಾರರಾಗಿದ್ದು, ಅಂಗಡಿಗಳ ಹೊಣೆ ಅವರದೇ ಜವಾಬ್ದಾರಿಯಾಗುತ್ತದೆ.
6. ಕುಲಸಚಿವರಿಂದ ಬಿಡ್ಡು ಖಾಯಂ ಆದ ನಂತರವೇ ಅಂಗಡಿಗಳಿಗೆ ಯಾವುದೇ ಅಪಾಯವಾಗದಂತೆ ನೋಡಿಕೊಳ್ಳಲು ಬದ್ಧರಾಗಿರತಕ್ಕದ್ದು. ಯಾವುದೇ ಸಂದರ್ಭಗಳಲ್ಲಿ ಸ್ಥಿರ ಚರ ಸೊತ್ತುಗಳನ್ನು ಕೊಂಡು ಹೋಗುವುದಾಗಲಿ ಅಥವಾ ದುರುಪಯೋಗಪಡಿಸಲು ಅವಕಾಶವಿರುವುದಿಲ್ಲ.
7. ಯಾವುದೇ ಕಾರಣವನ್ನು ಕೊಡದೇ ಹರಾಜನ್ನು ಮುಂದೂಡುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ವಿಶ್ವವಿದ್ಯಾನಿಲಯ ಕಾಯ್ದಿರಿಸಿದೆ. ಎಲ್ಲಾ ವಿಚಾರಗಳಲ್ಲಿಯೂ ವಿಶ್ವವಿದ್ಯಾನಿಲಯದ ತೀರ್ಮಾನವೇ ಅಂತಿಮ ಹಾಗೂ ಕ್ರಮಬದ್ಧ.
8. ಈ ಮೇಲಿನ ಯಾವುದೇ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ವಿಶ್ವವಿದ್ಯಾನಿಲಯವು ತೆಗೆದುಕೊಳ್ಳುವ ನಿರ್ಧಾರವೇ ಅಂತಿಮವಾಗಿರುತ್ತದೆ. ಮತ್ತು ಅದಕ್ಕೆ ಬಿಡ್ಡುದಾರರು ನೇರ ಜವಾಬ್ದಾರರಾಗಿರುತ್ತಾರೆ.
9. ಅಂಗಡಿಗಳ ತ್ಯಾಜ್ಯವನ್ನು ವಿಶ್ವವಿದ್ಯಾನಿಲಯ ಆವರಣದಿಂದ ಹೊರಭಾಗದ ಸೂಕ್ತ ಸ್ಥಳದಲ್ಲಿ ವಿಲೇವಾರಿ ಮಾಡುವುದು.
10. **ವಿಶ್ವವಿದ್ಯಾನಿಲಯ ಆವರಣದಲ್ಲಿ ಪ್ರಸ್ತುತ ಅಂಗಡಿ/ಕ್ಯಾಂಟೀನ್‌ಗಳನ್ನು ನಡೆಸುತ್ತಿರುವ ಪರವಾನಿಗೆದಾರರು ಅಂಗಡಿ/ಕ್ಯಾಂಟೀನ್‌ಗಳಿಗೆ ಪರವಾನಿಗೆ ಶುಲ್ಕ ಪಾವತಿಸಲು ಬಾಕಿ ಇದ್ದಲ್ಲಿ ಅಂತಹ ಪರವಾನಿಗೆದಾರರು ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸಲು ಅರ್ಹರಾಗಿರುವುದಿಲ್ಲ ಎಂಬ ಷರತ್ತನ್ನು ವಿಧಿಸಲಾಗಿದೆ. ಹಾಲಿ ಇರುವ ಅಂಗಡಿಯವರು ಭಾಗವಹಿಸಿದ್ದಲ್ಲಿ ವಿಶ್ವವಿದ್ಯಾನಿಲಯದ ಆಡಳಿತದಿಂದ N.O.C ಯನ್ನು ಪಡೆಯತಕ್ಕದ್ದು.**
11. ಅಂಗಡಿಗಳ ಸುತ್ತಮುತ್ತ ಸ್ವಚ್ಛತೆಯನ್ನು ನಿರ್ವಹಿಸತಕ್ಕದ್ದು. ತಪ್ಪಿದ್ದಲ್ಲಿ ಸ್ವಚ್ಛಗೊಳಿಸಲು ಬೇಕಾದ ಮಾನವ ಸಂಪನ್ಮೂಲ ವೆಚ್ಚದ 10 ಪಟ್ಟು ದಂಡವನ್ನು ವಿಧಿಸಲಾಗುವುದು.
12. ಅಂಗಡಿಗಳ ಪ್ರತೀ ತಿಂಗಳ ವಿದ್ಯುತ್ ಬಿಲ್ಲಿನೊಂದಿಗೆ ಬಾಡಿಗೆ ಶುಲ್ಕ ಹಾಗೂ ನೀರಿನ ಶುಲ್ಕವನ್ನು ರಶೀದಿಯಲ್ಲಿ ನಮೂದಿಸಿದಂತೆ ನೀಡುವುದು. ತಪ್ಪಿದಲ್ಲಿ ಟೆಂಡರು ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು.
13. ಒಂದು ವರ್ಷದ ಅವಧಿಯಲ್ಲಿ ಗುತ್ತಿಗೆದಾರರು/ಸಂಸ್ಥೆಯವರು ಸರಬರಾಜು ಮಾಡಿದ ವಸ್ತುಗಳ ಗುಣಮಟ್ಟದ ಆಧಾರದ ಮೇಲೆ ಮುಂದುವರಿಸಲಾಗುವುದು.